ಮಳೆಯಿಂದ ಸಂಪೂರ್ಣವಾಗಿ ಹಾನಿಗೊಂಡ ಮನೆಗಳೆಷ್ಟು ಹಾಗೂ ಜಖಂಗೊಂಡಿರುವ ಮನೆಗಳೆಷ್ಟು ?

ಆ) ಅವುಗಳಲ್ಲಿ ಹೊಳೆಹೊನ್ನೂರು ಕ್ಷೇತ್ರದ ಭದ್ರಾವತಿ ಮತ್ತು ಚನ್ನಗಿರಿ ತಾಲ್ಲೂಕು ವಿಭಾಗದಲ್ಲಿ ಪೂರ್ಣ ಹಾಗೂ ಭಾಗಶಃ ಬಿದ್ದ ಮನೆಗಳೆಷ್ಟು ?

ಇ) ಅವುಗಳಿಗೆ ಯಾವ ಪ್ರಮಾಣದಲ್ಲಿ ಪರಿಹಾರವನ್ನು ಕೊಡಲು ನಿರ್ಧರಿಸಲಾಗಿದೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ಪೂರ್ಣ ಹಾನಿಗೊಂಡ ಮನೆಗಳ ಸಂಖ್ಯೆ	430
ಜಖಂಗೊಂಡಿರುವ ಮನೆಗಳ ಸಂಖ್ಯೆ	13,400
ಆ) ಹೊಳೆಹೊನ್ನೂರು ಕ್ಷೇತ್ರದ ಭದ್ರಾವತಿ ತಾಲ್ಲೂಕಿನಲ್ಲಿ ಪೂರ್ಣ ಹಾನಿಯಾದ ಮನೆಗಳ ಸಂಖ್ಯೆ	57
ಹೊಳೆ ಹೊನ್ನೂರು ಕ್ಷೇತ್ರದ ಭದ್ರಾವತಿ ತಾಲ್ಲೂಕಿನಲ್ಲಿ ಭಾಗಶಃ ಹಾನಿಯಾದ ಮನೆಗಳ ಸಂಖ್ಯೆ	1106
ಹೊಳೆಹೊನ್ನೂರು ಕ್ಷೇತ್ರದ ಚೆನ್ನಗಿರಿ ತಾಲ್ಲೂಕಿನಲ್ಲಿ ಪೂರ್ಣಹಾನಿಯಾದ ಮನೆಗಳ ಸಂಖ್ಯೆ	101
ಹೊಳೆಹೊನ್ನೂರು ಕ್ಷೇತ್ರದ ಚನ್ನಗಿರಿ ತಾಲ್ಲೂಕಿನಲ್ಲಿ ಭಾಗಶಃ ಹಾನಿಯಾದ ಮನೆಗಳ ಸಂಖ್ಯೆ	806

ಇ) ಪೂರ್ಣವಾಗಿ ಹಾನಿಗೊಂಡ ಮನೆಗಳಿಗೆ ತಲಾ ರೂ. 5,000–00 ಪರಿಹಾರವನ್ನು ರೂ. 2,000–00 ನಗದಾಗಿ ಮತ್ತು ರೂ. 3,000–00ವನ್ನು ಕಟ್ಟಡ ಸಾಮಗ್ರಿಗಳ ರೂಪದಲ್ಲಿ ಮತ್ತು ಭಾಗಶಃ ಹಾನಿಗೊಂಡ ಮನೆಗಳಿಗೆ ಗರಿಷ್ಟ ಪರಿಹಾರ ರೂ. 2950.00 ಗಳನ್ನು ನಗದು ಮತ್ತು ಕಟ್ಟಡಗಳ ಸಾಮಗ್ರಿಗಳ ರೂಪದಲ್ಲಿ ಸರ್ಕಾರಿ ಆದೇಶದ ಪ್ರಕಾರ ಸಂಖ್ಯೆ: ಆರ್‌ಡಿ 167 ಟಿಎನ್‌ಆರ್ 88 ದಿನಾಂಕ 4.12.92ರ ಅನ್ವಯ ನೀಡಲಾಗುತ್ತದೆ.

ಹೊಳೆಹೊನ್ನೂರು ಕ್ಷೇತ್ರದಲ್ಲಿ ಭಾರೀ ಮಳೆಯಿಂದ ಬೆಳೆಗಳಿಗೆ ಆದ ಹಾನಿ

223 (776) ಶ್ರೀ ಕರಿಯಣ್ಣ (ಹೊಳೆಹೊನ್ನೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ದಿನಾಂಕ 16.11.92 ರಿಂದ 18.12.1992 ರವರೆಗೆ ಬಿದ್ದ ಭಾರೀ ಮಳೆಯಿಂದ ಎಷ್ಟು ಎಕರೆ ಪ್ರದೇಶ ಭತ್ತ, ಕಬ್ಬು, ಅಡಿಕೆ ತೋಟನಾಶವಾಗಿರುವುದು ?

ಆ) ಅದರಲ್ಲಿ ಹೊಳೆಹೊನ್ನೂರು ಕ್ಷೇತ್ರದಲ್ಲಿ ಹಾನಿಗೊಳಗಾದ ಭೂಮಿಯ ವಿಸ್ತೀರ್ಣವೆಷ್ಟು ?

ಇ) ಹಾನಿಗೊಳಗಾದ ಬೆಳೆಗಳಿಗೆ (ವಿವಿಧ ಬೆಳೆಗಳಿಗೆ) ಯಾವ ಪ್ರಮಾಣದಲ್ಲಿ ಪರಿಹಾರಧನವನ್ನು ನೀಡಲಾಗುವುದು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಆ) ಶಿವಮೊಗ್ಗ ಜಿಲ್ಲೆಯಲ್ಲಿ ದಿನಾಂಕ 16.11.92 ರಿಂದ 18.12.92 ರವರೆಗೆ ಬಿದ್ದ ಭಾರಿ ಮಳೆಯಿಂದ ಈ ಕೆಳಕಂಡ ಪ್ರದೇಶಗಳಲ್ಲಿ ಭತ್ತ, ಕಬ್ಬು, ಅಡಿಕೆ ತೋಟ ನಾಶವಾಗಿರುತ್ತದೆ.

ಭತ್ತ	31640 ಎಕರೆ
ಕಬ್ಬು	114 ಎಕರೆ
ಅಡಿಕೆ ತೋಟ	92 ಎಕರೆ

ಆ) ಹೊಳೆಹೊನ್ನೂರು ಕ್ಷೇತ್ರದಲ್ಲಿ ಹಾನಿಗೊಳಗಾದ ವಿಸ್ತೀರ್ಣ ಈ ಕೆಳಕಂಡಂತೆ ಇರುತ್ತದೆ:

1. ಭತ್ತ 956 ಎಕರೆ, 12 ಗುಂಟೆ
2. ಕಬ್ಬು 109 ಎಕರೆ, 18 ಗುಂಟೆ
3. ಅಡಿಕೆ ತೋಟ 75 ಎಕರೆ

ಇ) ಹಾನಿಗೊಂಡ ಪ್ರತಿ ಹೆಕ್ಟೇರ್ ಬೆಳೆಗೆ ರೂ. 500 ನಂತೆ, ವ್ಯವಸಾಯ ಸಾಮಗ್ರಿಗಳ ರೂಪದಲ್ಲಿ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಸಹಕಾರ ಸಂಘಗಳಿಗೆ ನಿರ್ದೇಶಕರಾಗಿ ನಿಲ್ಲಲು ಮೀಸಲಾತಿ ನೀಡುವ ವಿಚಾರ

225 (787) ಶ್ರೀ ಕರಿಯಣ್ಣ (ಹೊಳೆಹೊನ್ನೂರು):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಹಕಾರ ಸಂಘಗಳ ನಿರ್ದೇಶಕರುಗಳ ಸ್ಥಾನಕ್ಕೆ ಸ್ಪರ್ಧಿಸಲು ಮೀಸಲಾತಿಯನ್ನು ಸರ್ಕಾರ ಪಾಲಿಸುತ್ತಿದೆಯೇ ?

ಆ) ಹಾಗಿದ್ದಲ್ಲಿ, ಈ ಮೇಲ್ಕಂಡ ಸಂಘಗಳಲ್ಲಿ ಮೀಸಲಾತಿಯನ್ನು ಯಾವ ಪ್ರಮಾಣದಲ್ಲಿ ಹಾಗೂ ಯಾವ ವರ್ಗಕ್ಕೆ ಅನುಸರಿಸಲಾಗುತ್ತಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ) ಕೇವಲ ವ್ಯಕ್ತಿಗಳು ಮಾತ್ರ ಸದಸ್ಯರಾಗಿರುವ ಸಹಕಾರ ಸಂಘಗಳ ಆಡಳಿತ ಮಂಡಳಿಯ ರಚನೆಯಲ್ಲಿ ಮೀಸಲಾತಿ ನಿಯಮವನ್ನು ಪಾಲಿಸಲಾಗಿರುತ್ತದೆ.

ಆ) ಕೇವಲ ವ್ಯಕ್ತಿಗಳು ಮಾತ್ರ ಸದಸ್ಯರಾಗಿರುವ ಸಹಕಾರ ಸಂಘಗಳ ಆಡಳಿತ ಮಂಡಳಿಗಳಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೂ ಹಾಗೂ ಒಂದು ಸ್ಥಾನವನ್ನು ಮಹಿಳೆಯರಿಗೂ ಮೀಸಲಾಗಿಟ್ಟಿದೆ.

ದ. ಕನ್ನಡ ಜಿಲ್ಲೆಯಲ್ಲಿ ಕೃಷಿ ಸಹಾಯಕರ ಕೊರತೆ

227 (906) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಸ್ಥಳಗಳಲ್ಲಿ ಮಣ್ಣು ಪರೀಕ್ಷೆ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ?

ಆ) ಜಿಲ್ಲೆಯಲ್ಲಿ ಎಷ್ಟು ಜನ ಕೃಷಿ ಸಹಾಯಕರ ಕೊರತೆ ಇರುವುದು ?

ಇ) ಈ ಕೊರತೆಯನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?